ಪಠಣ ಕುತೂಹಲ

ಎಂ.ಎಸ್. ಶ್ರೀರಾಮ್



# ಭಿನ್ನಮತದ ಗಾಥೆಗಳು

ಒಂದು ಪದವನ್ನು ಬೈಗುಳವಾಗಿ ಉಪಯೋಗಿಸುವ ರೀತಿಯೇ ಅದರ ರಾಜಕೀಯ ಆಯಾಮಗಳನ್ನು ತೋರಿಸಿಕೊಡುತ್ತದೆಂದು ಚಾಮ್‌ಸ್ಕಿ ಹೇಳುತ್ತಾರೆ. 'ಉದಾರವಾದಿ' ಮತ್ತು 'ಧರ್ಮನಿರಪೇಕ್ಷ' ಎನ್ನುವ ಎರಡು ಉದಾತ್ತ ವಿಚಾರಗಳ ಅರ್ಥಪಲ್ಲಟದ ಹಿಂದಿರುವ ರಾಜಕೀಯವನ್ನು ಅರ್ಥಮಾಡಿಕೊಳ್ಳಲು ಚಾಮ್‌ಸ್ಕಿ ವಿಚಾರಗಳು ನಮಗೆ ಮಾರ್ಗದರ್ಶಕ.

ನಮ್ಮನ್ನು ನಿಜಕ್ಕೂ ಆಳುತ್ತಿರುವವರು ಯಾರು? ಪ್ರಜಾಸ್ವಾಮ್ಯವೆಂದರೆ ಏನು? ನಮ್ಮ ನೀತಿ ರೂಪಕಲ್ಪನೆ, ಅಂತರರಾಷ್ಟ್ರೀಯ ಸಂಬಂಧಗಳು, ರಣನೀತಿಯ ಹಿಂದಿರುವ ಪಟ್ಟಭದ್ರ ಹಿತಾಸಕ್ತಿಗಳನ್ನು ಅರಿಯುವುದು ಹೇಗೆ? ಭಾಷಾಪ್ರಯೋಗದಿಂದ ನಮ್ಮ ಮನಸ್ಸಿನಲ್ಲಿರಬಹುದಾದ ಸಹಮತ ಮತ್ತು ಭಿನ್ನಮತ ಹೇಗೆ ರೂಪುಗೊಳ್ಳುತ್ತದೆ ಎನ್ನುವ ವಿಚಾರಗಳನ್ನು ವಿಸ್ತಾರವಾಗಿ ಚರ್ಚಿಸುವ ಪುಸ್ತಕ ನಾಮ್ ಚಾಮ್‌ಸ್ಕಿ ಅವರ 'ಕ್ರಾನಿಕಲ್ಸ್ ಆಫ್ ಡಿಸೆಂಟ್'. ಈ ರೂಪದಲ್ಲಿ ಅಚ್ಚಾಗಿರುವ ಪುಸ್ತಕ ಹೊಸದಾದರೂ, ಇದರಲ್ಲಿ ಚಾಮ್‌ಸ್ಕಿಯವರ ಹೊಸ ವಿಚಾರಗಳೂ ಇಲ್ಲವಾದರೂ ಇಲ್ಲಿರುವ ಸಂಭಾಷಣೆಗಳು ಇಂದಿನ ಕಾಲಕ್ಕೆ ಪ್ರಸ್ತುತವಾಗಿವೆ. ಒಬ್ಬ ತತ್ವಜ್ಞಾನಿ, ದಾರ್ಶನಿಕನ ಮಹತ್ವ ಇರುವುದೇ ವಿಚಾರಗಳ ಪ್ರಸ್ತುತತೆ ವಿಶಾಲ ಕಾಲಘಟ್ಟಕ್ಕೆ ವಿಸ್ತರಿಸುತ್ತದೆನ್ನುವ ಮಾತಿನಲ್ಲಿ. ಮೇಲಾಗಿ ಈ ಪುಸ್ತಕ ಕಟ್ಟಿಕೊಂಡಿರುವ ರೀತಿಯೂ ಆಸಕ್ತಿಕರವಾಗಿದೆ. 650 ಪುಟಗಳಿಗೂ ಹೆಚ್ಚಿನ ಈ ಪುಸ್ತಕದಲ್ಲಿ ಅನೇಕ ವಿಷಯಗಳ ಬಗ್ಗೆ ಚಾಮ್‌ಸ್ಕಿಯ ಜೊತೆ ಡೇವಿಡ್ ಬಾರ್ಸ್ಮಿಯನ್ ನಡೆಸಿದ ದೀರ್ಘ ಸಂಭಾಷಣೆಗಳಿವೆ. ಮೂರು ಭಿನ್ನ ಪುಸ್ತಕಗಳ ಈ ಸಂಕಲನದಲ್ಲಿ 1984ರಿಂದ 1996ರವರೆಗೆ ಕೈಗೊಂಡ ಸಂಭಾಷಣೆಗಳಿವೆ. ಇದರಲ್ಲಿ ಯಾವುದೂ ನಮ್ಮ ಕಾಲಕ್ಕೆ ಒಗ್ಗದ ಹಳಸಲು ವಿಚಾರಗಳು ಎನ್ನಲಾಗುವುದಿಲ್ಲ.

ಚಾಮ್‌ಸ್ಕಿ ಮೂಲತಃ ಭಾಷಾಶಾಸ್ತ್ರಜ್ಞರು. ತೀಕ್ಷ್ಣ ರಾಜಕೀಯ ಟಿಪ್ಪಣಿಕಾರರು ಕೂಡಾ. ಅವರ ಟಿಪ್ಪಣಿಗಳಲ್ಲಿ ಭಾಷೆಯ ಉಪಯೋಗ, ಅದರಿಂದ ಉಂಟಾಗುವ ರಾಜಿ–ವಿರೋಧಗಳ ಒಳನೋಟಗಳಿರುತ್ತವೆ. ಜೊತೆಗೆ, ಈ ಪುಸ್ತಕದ ಕಟ್ಟುವಿಕೆಯಿಂದ ನಮಗೆ ಸಂಭಾಷಣೆಯ ಮಹತ್ವವೂ ಗೊತ್ತಾಗುತ್ತದೆ. ಗಹನ ವಿಚಾರಗಳ ಬಗ್ಗೆ ಪಾಂಡಿತ್ಯಪೂರ್ಣ ಲೇಖನಗಳನ್ನು ಓದುವಾಗ ಇರುವ ಒಂದು ತೊಡಕೆಂದರೆ, ಲೇಖನದ ಜೊತೆಗಿನ ಸಂವಾದ ಸಾಧ್ಯವಿರುವುದಿಲ್ಲ. ಆ ಲೇಖನದ ಇಂಗಿತವನ್ನು ಒಮ್ಮೊಮ್ಮೆ ವಿಸ್ತಾರವಾಗಿ ಅರ್ಥಮಾಡಿಕೊಳ್ಳಲು, ವಿಚಾರದ ಹಿನ್ನೆಲೆ ಮತ್ತು ಸಂದರ್ಭವನ್ನು ಪಡೆಯಲು ನಾವು ವಿಮರ್ಶಕರ ಮತ್ತು ಟಿಪ್ಪಣಿಕಾರರ ಮೊರೆಹೋಗುತ್ತೇವೆ. ಆದರೆ, ಸಂಭಾಷಣೆಗಳಲ್ಲಿ ಬೇಕಾದ ಸಂದರ್ಭವನ್ನು ಸೃಷ್ಟಿ ಮಾಡಬಹುದಲ್ಲದೇ, ವಿವರಣೆಯನ್ನು ತಕ್ಷಣಕ್ಕೆ ಪಡೆಯಲೂಬಹುದು. ಲೇಖಕನಲ್ಲಿರಬಹುದಾದ